# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | **363(287)** |
| **ಸದಸ್ಯರ ಹೆಸರು** | **ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ )** |
| **ವಿಷಯ** | **ಕೋವಿಡ್-19 ಸಾಂಕ್ರಾಮಿಕ ರೋಗದಿಂದ ಮೃತಪಟ್ಟವರಿಗೆ ನೀಡುವ ಪರಿಹಾರದ ಬಗ್ಗೆ.** |
| **ಉತ್ತರಿಸಬೇಕಾದ ದಿನಾಂಕ** | **14.09.2022** |
| **ಉತ್ತರಿಸುವ ಸಚಿವರು** | **ಕಂದಾಯ ಸಚಿವರು** |
| **ಪ್ರಶ್ನೆ** | **ಉತ್ತರ** |
| ಅ)ಕಳೆದ ಎರಡು ವರ್ಷದಲ್ಲಿ ರಾಜ್ಯದಲ್ಲಿ ಕೋವಿಡ್-19 ಸಾಂಕ್ರಾಮಿಕ ರೋಗದಿಂದ ಮೃತಪಟ್ಟವರ ಸಂಖ್ಯೆ ಎಷ್ಟು; ಜಿಲ್ಲಾವಾರು ಮಾಹಿತಿಯನ್ನು ನೀಡುವುದು) | ಆರೋಗ್ಯ ಇಲಾಖೆಯ Covid death ಬುಲೆಟಿನ್ ಅನ್ವಯ ರಾಜ್ಯದಲ್ಲಿ ಒಟ್ಟು 40094 ಕೋವಿಡ್-19 ಮೃತ ಪ್ರಕರಣಗಳು ದಾಖಲಾಗಿರುತ್ತದೆ.<br><br>ಜಿಲ್ಲಾವಾರು ಮಾಹಿತಿ ಅನುಬಂಧದಲ್ಲಿ ಲಗತ್ತಿಸಿದೆ. |
| ಆ)ಕೋವಿಡ್ ಪರಿಹಾರ ಮೊತ್ತವನ್ನು ನೀಡುವಾಗ ಅನುಸರಿಸುತ್ತಿರುವ ನಿಯಮ ಮತ್ತು ಮಾನದಂಡಗಳೇನು? | ಕೋವಿಡ್-19 ಮೃತ ಪರಿಹಾರ ನೀಡಲು ನಿಯಮ ಮತ್ತು ಮಾನದಂಡಗಳು ಈ ಕೆಳಕಂಡಂತಿದೆ.<br><br>• SDRF ವತಿಯಿಂದ ರೂ. 50,000 ಪರಿಹಾರವನ್ನು ಕೋವಿಡ್‌ನಿಂದ ಮೃತಪಟ್ಟ ಎಲ್ಲಾ ಕುಟುಂಬದ ಕಾನೂನುಬದ್ಧ ವಾರಸುದಾರನಿಗೆ ಪರಿಹಾರ ನೀಡಲಾಗುವುದು.<br><br>• ಹೆಚ್ಚುವರಿಯಾಗಿ ರೂ.1.00 ಲಕ್ಷ ಪರಿಹಾರ ಪಡೆಯಲು ಬಿ.ಪಿ.ಎಲ್ ಕುಟುಂಬಕ್ಕೆ ಸೇರಿರಬೇಕು. **(ಮೃತ ವ್ಯಕ್ತಿಯು ಹಾಗೂ ಅರ್ಜಿದಾರರು ಒಂದೇ ಬಿಪಿಎಲ್ ಕುಟುಂಬದ ಸದಸ್ಯನಾಗಿರಬೇಕು)** |
| ಇ)ಕೋವಿಡ್ ಸಾಂಕ್ರಾಮಿಕ ರೋಗದಿಂದ ಮೃತಪಟ್ಟ ಕುಟುಂಬಗಳಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ನೀಡುವ ಪರಿಹಾರದ ಮೊತ್ತವೆಷ್ಟು; | ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ಕೋವಿಡ್ ನಿಂದ ಮೃತಪಟ್ಟ ಎಲ್ಲಾ ಪ್ರಕರಣಗಳಲ್ಲಿ ರೂ.50,000/-ಗಳ ಪರಿಹಾರಧನವನ್ನು ರಾಜ್ಯ ವಿಪತ್ತು ಪರಿಹಾರ ನಿಧಿ (SDRF)ಯಿಂದ ನೇರ ಹಣ ಸಂದಾಯದ ಮೂಲಕ ಫಲಾನುಭವಿಗಳಿಗೆ ಪಾವತಿಸಲಾಗುತ್ತಿದೆ.<br><br>ಮುಂದುವರೆದು, ಆರೋಗ್ಯ ಇಲಾಖೆಯ ದತ್ತಾಂಶದಲ್ಲಿ ಲಭ್ಯವಿರುವ ಬಿಪಿಎಲ್ ಕುಟುಂಬದ ಕೋವಿಡ್ ಮೃತ ಪ್ರಕರಣಗಳಿಗೆ ರಾಜ್ಯ ಸರ್ಕಾರವು ಘೋಷಿಸಿರುವ ಹೆಚ್ಚುವರಿ ರೂ.1.00 ಲಕ್ಷ ಪರಿಹಾರವನ್ನು ಚೆಕ್ ಮೂಲಕ ಜಿಲ್ಲಾಧಿಕಾರಿಗಳಿಂದ ವಿತರಿಸಲಾಗುತ್ತಿದೆ. |

| | |
|---|---|
| ಈ)ಇಲ್ಲಿಯವರೆಗೂ ಈ ಪರಿಹಾರಕ್ಕಾಗಿ ಅರ್ಜಿ ಸಲ್ಲಿಸಿದವರ ಸಂಖ್ಯೆ ಎಷ್ಟು; ಪರಿಹಾರ ಮೊತ್ತವನ್ನು ಎಷ್ಟು ಕುಟುಂಬಗಳಿಗೆ ನೀಡಲಾಗಿದೆ; ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಇಲ್ಲಿಯವರೆಗೆ ನೀಡಿದ ಮೊತ್ತವೆಷ್ಟು; (ಸಂಪೂರ್ಣ ಮಾಹಿತಿಯನ್ನು ನೀಡುವುದು) | ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ರೂ.50,000/-ಗಳ ಪರಿಹಾರ ಧನಕ್ಕಾಗಿ ರಾಜ್ಯದಲ್ಲಿ ಒಟ್ಟು 67464 ಅರ್ಜಿಗಳು ಸ್ವೀಕೃತವಾಗಿದ್ದು, ಈ ಪೈಕಿ ಪರಿಶೀಲಿಸಿ ಜಿಲ್ಲಾಧಿಕಾರಿಗಳು ಅನುಮೋದಿಸಲಾದ 66294 ಪ್ರಕರಣಗಳಲ್ಲಿ 62082 ಪ್ರಕರಣಗಳಿಗೆ ತಲಾ ರೂ.50,000/-ದಂತೆ ಪರಿಹಾರ ವಿತರಣೆಗೆ ಕ್ರಮವಹಿಸಲಾಗಿದೆ. ಉಳಿಕೆ 587 ಪ್ರಕರಣಗಳು DBT Validation ಹಂತದಲ್ಲಿದೆ ಮತ್ತು 3625 ಪ್ರಕರಣಗಳಲ್ಲಿ ಅರ್ಜಿದಾರರ ಬ್ಯಾಂಕ್ ಖಾತೆ ಆಧಾರ್ ನೊಂದಿಗೆ ಜೋಡಣೆಯಾಗಿರುವುದಿಲ್ಲ. ಆದ್ದರಿಂದ ಇಂತಹ ಪ್ರಕರಣಗಳಲ್ಲಿ ಆಧಾರ್ ನ್ನು ಬ್ಯಾಂಕ್ ಖಾತೆಗೆ ಜೋಡಣೆ ಮಾಡಿಕೊಳ್ಳುವಂತೆ ಅರ್ಜಿದಾರರ ಮೊಬೈಲ್ ಗೆ SMS ಕಳುಹಿಸಲಾಗುತ್ತಿದೆ. ಬಾಕಿ 1170 ಪ್ರಕರಣಗಳು ಪರಿಶೀಲನಾ ಹಂತದಲ್ಲಿದ್ದು, ಜಿಲ್ಲಾ ಮಟ್ಟದಲ್ಲಿ ಪರಿಶೀಲಿಸಿ ಅನುಮೋದನೆ ನೀಡಿದ ನಂತರ ಅರ್ಹ ಪ್ರಕರಣಗಳಿಗೆ ಶೀಘ್ರವೇ ಪರಿಹಾರ ವಿತರಿಸಲು ಕ್ರಮವಹಿಸಲಾಗುವುದು. |
| ಉ)ಬಾಕಿ ಉಳಿದಿರುವ ಅರ್ಜಿಗಳನ್ನು ಯಾವ ಕಾಲಮಿತಿಯೊಳಗೆ ಇತ್ಯರ್ಥಗೊಳಿಸಲಾಗುವುದು? | ಮುಂದುವರೆದು, ರಾಜ್ಯ ಸರ್ಕಾರವು ಬಿ.ಪಿಎಲ್ ಕುಟುಂಬದವರಿಗೆ ಘೋಷಿಸಿರುವ ಹೆಚ್ಚುವರಿ ರೂ.1.00 ಲಕ್ಷ ಪರಿಹಾರಕ್ಕಾಗಿ ಜಿಲ್ಲಾಧಿಕಾರಿಗಳು/ಬಿಬಿಎಂಪಿ ಜಂಟಿ ಆಯುಕ್ತರಿಂದ ಅನುಮೋದನೆಯಾದ 14705 ಅರ್ಹ ಪ್ರಕರಣಗಳಿಗೆ ತಲಾ ರೂ.1.00 ಲಕ್ಷ ಪರಿಹಾರವನ್ನು ಚೆಕ್ ಮೂಲಕ ವಿತರಿಸಲಾಗಿದೆ. ಉಳಿಕೆ 212 ಪ್ರಕರಣಗಳಿಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳ ಹಂತದಲ್ಲಿ ಬಿಲ್ ತಯಾರಿಕೆ ಕಾರ್ಯ ಪ್ರಗತಿಯಲ್ಲಿದ್ದು, ಶೀಘ್ರವೇ ಚೆಕ್ ವಿತರಣೆಗೆ ಕ್ರಮವಹಿಸಲಾಗುವುದು. |

**ಸಂಖ್ಯೆ: DSSP-LCQ-/23/2022**

**(ಆರ್ ಅಶೋಕ)**

**ಕಂದಾಯ ಸಚಿವರು**

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ )ರವರ
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 363(287)ಕ್ಕೆ ಅನುಬಂಧ

<table>
<tr><th>ಕ್ರಮ ಸಂಖ್ಯೆ</th><th>ಜಿಲ್ಲೆ</th><th>ಆರೋಗ್ಯ ಇಲಾಖೆಯ Covid death ಬುಲೆಟಿನ್ ಅನ್ವಯ ಕೋವಿಡ್ ಮೃತ ಪ್ರಕರಣಗಳು</th></tr>
<tr><td>1</td><td>Bagalkot</td><td>368</td></tr>
<tr><td>2</td><td>Ballari</td><td rowspan="2">1765</td></tr>
<tr><td>3</td><td>Vijayanagara</td></tr>
<tr><td>4</td><td>Bangalore Rural</td><td>907</td></tr>
<tr><td>5</td><td>Belagavi</td><td>1005</td></tr>
<tr><td>6</td><td>Bengaluru Urban</td><td rowspan="2">16973</td></tr>
<tr><td>7</td><td>Bengaluru BBMP</td></tr>
<tr><td>8</td><td>Bidar</td><td>420</td></tr>
<tr><td>9</td><td>Chamarajanagar</td><td>524</td></tr>
<tr><td>10</td><td>Chikballapur</td><td>461</td></tr>
<tr><td>11</td><td>Chikkamagaluru</td><td>407</td></tr>
<tr><td>12</td><td>Chitradurga</td><td>239</td></tr>
<tr><td>13</td><td>Dakshina Kannada</td><td>1844</td></tr>
<tr><td>14</td><td>Davanagere</td><td>624</td></tr>
<tr><td>15</td><td>Dharwad</td><td>1387</td></tr>
<tr><td>16</td><td>Gadag</td><td>337</td></tr>
<tr><td>17</td><td>Hassan</td><td>1307</td></tr>
<tr><td>18</td><td>Haveri</td><td>669</td></tr>
<tr><td>19</td><td>Kalaburagi</td><td>882</td></tr>
<tr><td>20</td><td>Kodagu</td><td>352</td></tr>
<tr><td>21</td><td>Kolar</td><td>665</td></tr>
<tr><td>22</td><td>Koppal</td><td>538</td></tr>
<tr><td>23</td><td>Mandya</td><td>711</td></tr>
<tr><td>24</td><td>Mysuru</td><td>2560</td></tr>
<tr><td>25</td><td>Raichur</td><td>365</td></tr>
<tr><td>26</td><td>Ramanagara</td><td>347</td></tr>
<tr><td>27</td><td>Shivamogga</td><td>1129</td></tr>
<tr><td>28</td><td>Tumakuru</td><td>1218</td></tr>
<tr><td>29</td><td>Udupi</td><td>547</td></tr>
<tr><td>30</td><td>Uttara Kannada</td><td>810</td></tr>
<tr><td>31</td><td>Vijayapura</td><td>521</td></tr>
<tr><td>32</td><td>Yadgir</td><td>212</td></tr>
<tr><td colspan="2">GRAND TOTAL</td><td>40094</td></tr>
</table>